ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಶ್ವವಾಣಿ

ದಿನಾಂಕ : DATE : 02/08/2019

8 ದಿನ ಸಂಪುಟ ವಿಸ್ತರಣೆಯಿಲ್ಲವೆಂದು ಹೈಕಮಾಂಡ್‌ನಿಂದ ಸ್ಪಷ್ಟ ಸೂಚನೆ

# ಸಂಪುಟ ರಚನೆ ಜುಟ್ಟು ಹೈಕಮಾಂಡ್ ಕೈಯಲ್ಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

2/8/19

ರಾಜ್ಯದಲ್ಲಿ ಬಿಜೆಪಿ ಸರಕಾರ ರಚಿಸಿರುವ ಖುಷಿಯಲ್ಲಿ ಬಿಜೆಪಿ ನಾಯಕರಿದ್ದರೂ, ಸಂಪುಟ ವಿಸ್ತರಣೆ ಮಾಡುವ ಸಂಪೂರ್ಣ ಜುಟ್ಟನ್ನು ದೆಹಲಿಯ ಬಿಜೆಪಿ ವರಿಷ್ಠರು ಹಿಡಿದುಕೊಂಡಿದ್ದಾರೆ.

ಮುಖ್ಯಮಂತ್ರಿಯಾಗಿ ಯಡಿಯೂರಪ್ಪ ಅವರು ಅಧಿಕಾರ ಸ್ವೀಕರಿಸುತ್ತಿದ್ದಂತೆ, ಬಿಜೆಪಿಯ ಹಲವು ರಾಜ್ಯ ನಾಯಕರು ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಇದಕ್ಕಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮೇಲೆ ಜಾತಿ, ಪ್ರಾಂತ್ಯ ಹಾಗೂ ಇನ್ನಿತರೆ ಅಂಶಗಳನ್ನಿಟ್ಟುಕೊಂಡು ಒತ್ತಡ ಹೇರುವ ಕೆಲಸ ಮಾಡಿದ್ದರು. ಆದರೀಗ, ಇಡೀ ಸಂಪುಟ ರಚನೆಯನ್ನು ಬಿಜೆಪಿ ಅಧ್ಯಕ್ಷ ಅಮಿತ್ ಶಾ, ನರೇಂದ್ರ ಮೋದಿ ಹಾಗೂ ಕಾರ್ಯಾಧ್ಯಕ್ಷ ಜೆ.ಪಿ ನಡ್ಡಾ ಅವರೇ ನಿರ್ಧರಿಸಲಿದ್ದಾರೆ ಎಂದು ತಿಳಿದುಬಂದಿದೆ.

ಯಡಿಯೂರಪ್ಪ ಅವರು ತಮ್ಮ ಸಂಪುಟಕ್ಕೆ 34 ಸಚಿವರನ್ನು ತಗೆದುಕೊಳ್ಳುವ ಅವಕಾಶ ಏದೆ. ಇದರಲ್ಲಿ 8-10 ಖಾಲಿಯಿಟ್ಟುಕೊಳ್ಳುವ ನಿರ್ಧಾರಕ್ಕೆ ಈಗಾಗಲೇ ಬರಲಾಗಿದೆ. ಬಾಕಿಯಿರುವ 24-26 ಸಚಿವ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕೆಂಬ ನಿರ್ಧಾರಕ್ಕೆ ಬರಲಾಗಿತ್ತು. ಈ ಎಲ್ಲ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕೆಂಬ ಬಗ್ಗೆ ಪಕ್ಷದ ವರಿಷ್ಠರೇ ನಿರ್ಧರಿಸಲಿದ್ದಾರೆ ಎಂದು ತಿಳಿದುಬಂದಿದೆ.

**ಬಿಎಸ್‌ವೈ ಮೇಲೆ ಒತ್ತಡ:** ಪಕ್ಷದ ವರಿಷ್ಠರೇ ಸಚಿವರನ್ನು ನಿರ್ಧರಿಸುತ್ತಾರೆ ಎನ್ನುವುದು ಖಚಿತವಾದರೂ, ಸಚಿವಾಕಾಂಕ್ಷಿಗಳು ಯಡಿಯೂರಪ್ಪ ಅವರ ಮೇಲೆ ತಮಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಡ ಹೇರುತ್ತಿದ್ದಾರೆ ಎನ್ನಲಾಗಿದೆ. ಪಕ್ಷದ ಹೈಕಮಾಂಡ್ ಜತೆ ಚರ್ಚೆ ಸಮಯದಲ್ಲಿ, ತಮ್ಮ ಬಗ್ಗೆ ಶಿಫಾರಸು ಮಾಡಬೇಕೆಂದು ಅನೇಕ ಶಾಸಕರು ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆದರೆ, ಪಕ್ಷದ ವರಿಷ್ಠರು ರಾಜ್ಯ ನಾಯಕರಿಗೆ, ನಿಗಮ ಮಂಡಳಿ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಆರಿಸುವುದಕ್ಕೆ ಅವಕಾಶ ನೀಡಿದೆ. ಆದ್ದರಿಂದ ಸಚಿವ ಸ್ಥಾನಕ್ಕೆ ಸಂಬಂಧಿಸಿದಂತೆ, ಕೇವಲ ಸಲಹೆಗಳನ್ನು ಮಾತ್ರ ನೀಡುವುದಾಗಿ ಯಡಿಯೂರಪ್ಪ ಈಗಾಗಲೇ ತಮ್ಮ ಪಕ್ಷದ ಶಾಸಕರಿಗೆ ಸ್ಪಷ್ಟಪಡಿಸಿದ್ದು, ಹೈಕಮಾಂಡ್ ಹೇಳಿದವರೇ ಸಚಿವರಾಗುತ್ತಾರೆ ಎಂದಿದ್ದಾರೆ ಎನ್ನಲಾಗಿದೆ.

ಇದರೊಂದಿಗೆ ವಿಧಾನಪರಿಷತ್‌ನಿಂದ ಯಾರಿಗೆ ಸಚಿವ ಸ್ಥಾನ ನೀಡಬೇಕು ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ, ಹಲವು ಗೊಂದಲಗಳಿವೆ. ವಿರೋಧ ಪಕ್ಷದ ನಾಯಕರಾಗಿದ್ದ ಕೋಟಾ ಶ್ರೀನಿವಾಸ ಪೂಜಾರಿ, ಆಯನೂರು ಮಂಜುನಾಥ, ರವಿಕುಮಾರ್ ನಡುವೆ ಭಾರಿ ಪೈಪೋಟಿಯಿದೆ. ಪ್ರಮುಖವಾಗಿ ಯಡಿಯೂರಪ್ಪ ಅವರ ಆಪ್ತರಾಗಿರುವ ಆಯನೂರು ಮಂಜುನಾಥ ಹಾಗೂ ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕನಾಗಿ ಸಮರ್ಥವಾಗಿ ನಿಭಾಯಿಸಿದ ಕೋಟಾ ಶ್ರೀನಿವಾಸ ಪೂಜಾರಿ ನಡುವೆ ಪೈಪೋಟಿಯಿದ್ದು, ಯಾರು ಆಯ್ಕೆಯಾಗುತ್ತಾರೆ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ.





## ಆಗಸ್ಟ್ 8ರವರೆಗೆ ವಿಸ್ತರಣೆಯಿಲ್ಲ

**ಬಹುಮತ ಸಾಬೀತುಪಡಿಸಿದ ದಿನದಿಂದ, ಸಚಿವ ಸಂಪುಟ ವಿಸರಿಸಲು ಯಡಿಯೂರಪ್ಪ ಹಾಗೂ ರಾಜ್ಯ ಬಿಜೆಪಿ ನಾಯಕರು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ ಇದಕ್ಕೆ ಬಿಜೆಪಿ ರಾಷ್ಟ್ರೀಯ ನಾಯಕರು ಮಾತ್ರ ಒಪ್ಪಿಗೆ ನೀಡದಿರುವುದು ರಾಜ್ಯ ನಾಯಕರ ಆತಂಕಕ್ಕೆ ಕಾರಣವಾಗಿದೆ. ದೆಹಲಿಗೆ ಬರುವುದಕ್ಕೆ ಅಮಿತ್ ಶಾ, ನಡ್ಡಾ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಸಮಯವನ್ನು ಯಡಿಯೂರಪ್ಪ ಅವರು ಕೇಳಿದರೂ, ಅದಕ್ಕೆ ಒಪ್ಪಿಗೆ ನೀಡಿಲ್ಲ. ಸದ್ಯ ಸಂಸತ್‌ನಲ್ಲಿ ಕಲಾಪ ನಡೆಯುತ್ತಿದ್ದು ಶಾ ಅವರು ಗೃಹ ಖಾತೆ ಹೊಂದಿರುವುದರಿಂದ ಹೆಚ್ಚು ಕಾಲ ಅಲ್ಲಿಯೇ ಕಳೆಯಬೇಕಿದೆ. ಆದ್ದರಿಂದ ಸಂಸತ್ ಕಲಾಪ ಮುಗಿಯುವ ತನಕ ದೆಹಲಿಗೆ ಬರುವುದು ಬೇಡ ಎನ್ನುವ ಸ್ಪಷ್ಟ ಮಾತನ್ನು ತಿಳಿಸಿದ್ದಾರೆ. ಆ.7ಕ್ಕೆ ಲೋಕಸಭಾ ಕಾರ್ಯಕಲಾಪ ಮುಗಿಯುವುದರಿಂದ, ನಂತರ ಯಡಿಯೂರಪ್ಪ ಅವರನ್ನು ಕರೆಸಿಕೊಂಡು ಯಾರಿಗೆ ಸಚಿವ ಸ್ಥಾನ ನೀಡಬೇಕೆಂಬ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಆದ್ದರಿಂದ ಪೂರ್ಣ ಪ್ರಮಾಣದ ಸಚಿವ ಸಂಪುಟ ರಚನೆ ಆ.8ರ ಬಳಿಕವೇ ಆಗಲಿದೆ ಎನ್ನುವ ಮಾತನ್ನು ಬಿಜೆಪಿ ಮೂಲಗಳು ತಿಳಿಸಿವೆ.**

## ಬಿಎಸ್‌ವೈಗೆ ಶಾ ಸೂಚನೆಯೇನು?

- ಸಚಿವ ಸ್ಥಾನಕ್ಕೆ ಜಾತಿ ಲೆಕ್ಕಾಚಾರದಲ್ಲಿ ಲಾಬಿ ಬೇಡ
- ಪಾರದರ್ಶಕ ಆಡಳಿತ ನೀಡುವ ವ್ಯಕ್ತಿಗಳ ಹೆಸರನ್ನು ಸಚಿವ ಸ್ಥಾನಕ್ಕೆ ತನ್ನಿ
- ಜಾತಿವಾರು ಬದಲು, ಪ್ರಾಂತ್ಯವಾರು ಲೆಕ್ಕಾಚಾರದಲ್ಲಿ ಹಂಚಿಕೆ
- ಕರ್ನಾಟಕದಲ್ಲಿ ಬಿಜೆಪಿಯಿಂದ ಮಾದರಿ ಆಡಳಿತ ನೀಡುವಂತೆ ಎಚ್ಚರವಹಿಸಿ
- ಸಚಿವ ಸ್ಥಾನಕ್ಕೆ ಆಪ್ತರಿಗೆ ಮಣೆ ಹಾಕುವ ಬದಲು, ಕೆಲಸ ಮಾಡುವವರಿಗೆ ಪ್ರಾಧನ್ಯತೆ ನೀಡಿ